ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು.

ಮಹಿಳಾ ಸಹಕಾರ ಸಂಘಗಳಿಗೆ ಸರ್ಕಾರದ ಪ್ರತ್ಯೇಕ ಷೇರು ಹಣ.

3433- ಶ್ರೀಮತಿ ಮಲ್ಲಾಜಮ್ಮ (ಮಳವಳ್ಳಿ) : ಮಾನ್ಯ ಸಹಕಾರ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. *ರಾಜ್ಯದಲ್ಲಿ ಮಹಿಳಾ ಸಹಕಾರ ಸಂಘಗಳಿಗೆ ಸರ್ಕಾರ ದಿಂದ ಪ್ರತ್ಯೇಕ ಶೇರುಹಣವನ್ನು ಕೊಡುವ ವ್ಯವಸ್ಥೆ ಇದೆಯೇ?*
2. *ಸಹಕಾರ ಸಂಘಗಳಿಗೆ ನಾಮಕರಣ ಮಾಡುವಾಗ ಮಹಿಳಾ ಪ್ರತಿನಿಧಿಗಳನ್ನು ಕಡ್ಡಾಯವಾಗಿ ನೇಮಕ ಮಾಡುವ ಯೋಜನೆ ಸರ್ಕಾರಕ್ಕಿದೆಯೇ?*
3. *ಹಾಗಿದ್ದಲ್ಲಿ ಅದನ್ನು ಕೂಡಲೇ ಜಾರಿಗೆ ತರಲಾಗುವುದೇ?*

ಶ್ರೀ ಎಸ್. ಆರ್. ಮೋರೆ. (ಸಹಕಾರ ರಾಜ್ಯ ಸಚಿವರು) :

1. ಇದೆ.

2. ಇಲ್ಲಾ.

3. ಸಹಕಾರ ಸಂಘಗಳ ಕಾಯ್ದೆ 1959ರ ನಿಯಮ 28(ಎ) ಪ್ರಕಾರ ಈಗಾಗಲೇ ಒಂದು ಮಹಿಳಾ ಪ್ರತಿನಿಧಿಗೆ ಆಡಳಿತ ಮಂಡಳಿಯಲ್ಲಿ ಅವಕಾಶ ಇರುವುದರಿಂದ ಸರ್ಕಾರ ಮಹಿಳಾ ಪ್ರತಿನಿಧಿಗಳನ್ನು ಸರ್ಕಾರದ ನಾಮಿನಿಯಾಗಿ ನೇಮಕ ಮಾಡುವು ಅವಶ್ಯಕತೆತ ಕಂಡು ಬರುವುದಿಲ್ಲ.

ಹೊಸದುರ್ಗ ತಾಲ್ಲೂಕಿನಲ್ಲಿ ಕೃಷಿಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕಿನ ರಚತ ಮಹೋತ್ಸವದ ಆಚರಣೆ

3372 - ಶ್ರೀ ಇ. ವಿಜಯ ಕುಮಾರು (ಹೊಸದುರ್ಗ) : ಮಾನ್ಯ ಸಹಕಾರ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) *ಹೊಸದುರ್ಗ ತಾಲ್ಲೂಕಿನ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ರಜತ ಮಹೋತ್ಸವವನ್ನು ಆಚರಿಸಿದೆಯೇ*

ಆ) *ಹಾಗಿದ್ದಲ್ಲಿ ಇದಕ್ಕಾಗಿ ಬ್ಯಾಂಕಿನ ವತಿಯಿಂದ ಹಣ ಖರ್ಚು ಮಾಡಲಾಗಿದೆಯೇ?*

ಶ್ರೀ ಎಸ್.ಆರ್.ಮೋರೆ (ಸಹಕಾರ ಸಚಿವರು)

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.

ಕೈಗಾರಿಕೆಗಳಿಂದ ವಿದ್ಯುತ್ ಶುಲ್ಕದ ಬಾಕಿ

3426 - ಶ್ರೀ ಡಿ.ಎ. ಚಿನ್ನಪ್ಪ (ಮಡಕೇರಿ) : ಮಾನ್ಯ ಇಂಧನ ರಾಜ್ಯ ಮಂತ್ರಿಗಳು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ವಿವಿಧ ಕೈಗಾರಿಕೆಗಳಿಂದ ವಿದ್ಯುಚ್ಛಕ್ತಿ ಶುಲ್ಕದ ಬಾಬ್ತು ಮೊತ್ತದ ಹಣವು ಬಾಕಿಯಿರುವುದು ನಿಜವೆ?*